

ಬೆಂಗಳೂರಿನಲ್ಲಿ ಅಮಿತಾಭ್ ಜೊತೆ ನಟ ಶಶಿ ಕಪೂರ್ ಹಾಗೂ ಸಿನಿಮಾ ನಿರ್ದೇಶಕ ಮಾಂಡ್ರೆ

## ಪಾತ್ರಗಳ ಆಯ್ಕೆಯ ಪ್ರಬುದ್ಧತೆ

ಅಮಿತಾಭ್ ಪಾತ್ರಗಳನ್ನು ಆಯ್ಕೆ ಮಾಡಿಕೊಳ್ಳುವ ರೀತಿ ನನಗೆ ತುಂಬ ಇಷ್ಟ. ಎರಡು ಸಾಲು ಹೇಳಿದರೆ ಸಾಕು, ಅವರಿಗೆ ಪಾತ್ರದ ತೂಕ ಗೊತ್ತಾಗುತ್ತದೆ. ಅವರಲ್ಲೊಬ್ಬ ಅದ್ಭುತ ಕತೆಗಾರನಿದ್ದಾನೆ; ಕವಿ ಇದ್ದಾನೆ; ಪ್ರೇಕ್ಷಕ ಕೂಡ ಇದ್ದಾನೆ. ನಮ್ಮಲ್ಲಿ ರಾಜ್‌ಕುಮಾರ್, ಅನಂತ್‌ನಾಗ್, ಅಂಬರೀಷ್ ಹೀಗೆ ಅವರ ಪೀಳಿಗೆಯ ಹಲವರಲ್ಲಿ ಆ ಶಕ್ತಿ ಇದೆ. ಹೊಸ ಪೀಳಿಗೆಯಲ್ಲಿ ಯಶ್ ಹೀಗೆ ತುಂಬ ಗಟ್ಟಿ ಪಾತ್ರಗಳನ್ನು ಆಯ್ಕೆ ಮಾಡುವ ನಟ. ಬೇರೆ ಸುಮಾರು ಹೀರೊಗಳು ತೀರಾ ಸಾಧಾರಣ ಹಾಗೂ ಮಾಮೂಲಿ ಪಾತ್ರಗಳಲ್ಲಿ ದೊಡ್ಡ ಯಶಸ್ಸು ಕಂಡಿರುವುದರಿಂದ, ಅವರಿಗೆ ಒಳ್ಳೆಯ ಕಥೆ ಅಥವಾ ಒಳ್ಳೆಯ ಪಾತ್ರದ ಅವಶ್ಯಕತೆ ಅಷ್ಟಾಗಿ ಇಲ್ಲ ಅನ್ನಬಹುದು. ಅವರ ಸಾಮರ್ಥ್ಯ ಬೇರೆ ಇರತ್ತೆ.

ಗೊತ್ತಾಯ್ತು. ಅವರ ವ್ಯಕ್ತಿತ್ವಾನೇ ನಂಬಿ ಬೆಳೆದಿರುತ್ತೇವೆ ನಾವು. ನಮ್ಮೊಳಗೆ ಇರುವ ಅವರ ಚಿತ್ರ ತುಂಬ ಗಟ್ಟಿಯಾಗಿರುತ್ತದೆ. ಆ ಚಿತ್ರಕ್ಕೆ ಎಲ್ಲಿ ಧಕ್ಕೆ ಬರುತ್ತದೋ ಎಂಬ ಆತಂಕವೂ ಇರಬಹುದು. 'ಫ್ಯಾನ್ಸ್' ಅಂತ ಹೇಳ್ತಾರಲ್ಲಾ, ಆ ರೀತಿ ಅಮಿತಾಭ್ ಫ್ಯಾನ್ ಆಗಿದ್ದೋನು ನಾನು, ಅವರು ನನ್ನ ಎದುರೇ ಕೂತಿದ್ದಾರೆ ಎನ್ನುವುದನ್ನು ನಂಬಲಿಕ್ಕೇ ಕಷ್ಟ ಆಗಿಹೋಯ್ತು.

ನಂತರ ನಾನು ಹಿಂದಿಯಲ್ಲಿ, ಪ್ರಕಾಶ್ ಬೆಳವಾಡಿ ಇಂಗ್ಲಿಷಲ್ಲಿ ಕಥೆಯನ್ನು ಹೇಳಿದ್ವಿ. ಕಥೆ ಕೇಳಿ ಎರಡೂವರೆ ನಿಮಿಷದಲ್ಲಿ, ಆಳವಾದ ಧ್ವನಿಯಲ್ಲಿ ಪರಾಮರ್ಶೆ ಮಾಡಿದರು. ಇದು ಇಷ್ಟ ಆಯ್ತು, ಈ ಅಂಶಗಳು ಇಷ್ಟ ಆಗ್ಲಿಲ್ಲ ಎಂದು ವಿವರಣೆ ಕೊಟ್ಟರು. 'ಮತ್ತೆ ಭೇಟಿಯಾಗೋಣ, ನನಗೆ ಎಲ್ಲಿಗೋ ಹೋಗಬೇಕು' ಎಂದು ಎದ್ದು ಹೊರಟರು. ಅವರು ಹೊರಟಿದ್ದೇ ರಾಕ್‌ಲೈನ್ ವೆಂಕಟೇಶ್, 'ಏನ್ರೀ, ಅವ್ರನ್ನು ನೋಡ್ಕೊಂಡು ಎರಡನೇ ಕ್ಲಾಸ್ ಮಕ್ಕಳ ಥರ ಕೂತಿದೀರಲ್ರೀ' ಎಂದು ನನ್ನನ್ನು ಬೈದ್ರು.

ಅದಾಗಿ ಒಂದೂವರೆ ತಿಂಗಳ ನಂತರ ನಾನು, ರಾಕ್‌ಲೈನ್ ಮತ್ತೆ ಹೋದೆವು. ಅದೇ ಕಥೆಗೆ ಕೈ, ಕಾಲು, ಬಾಯಿ ಎಲ್ಲ ಸಿದ್ಧವಿತ್ತು. ಅವತ್ತೂ ಹಾಗೆಯೇ ಕೂತಿದ್ದರು. ಈ ಸಲ ನಾವು ಸರಿಯಾಗಿ ಸಿದ್ಧತೆ ಮಾಡಿಕೊಂಡು ಹೋಗಿದ್ದೆವು. ಕ್ವಿಕ್ ಆಗಿ ಏನೇನು ಬದಲಾವಣೆ ಮಾಡಿಕೊಂಡಿದ್ದೇವೆ. ಕಥೆ ಹೇಗಿದೆ ಎನ್ನುವುದನ್ನೆಲ್ಲ ಹೇಳಿಬಿಟ್ಟೆವು. ತಲೆಯಲ್ಲಿ ಬುಲೆಟ್ ಉಳಿದುಕೊಂಡಿರುವ ಮಾಜಿ ಸೈನಿಕನ ಪಾತ್ರ ಅವರದ್ದು. ಬುಲೆಟ್ ತೆಗೆದರೆ ಸತ್ತೋಗ್ತಾರೆ ಎಂದು ಹಾಗೆಯೇ ಬಿಟ್ಟಿರುತ್ತಾರೆ. ಅವರೊಬ್ಬ ಅನಾಥಾಶ್ರಮದ ಮೇಷ್ಟ್ರು ಅಂತ ಕಥೆ ಮಾಡಿಕೊಂಡಿದ್ದೆವು. ಅದು ಅವರಿಗೆ ಸಿಕ್ಕಾಪಟ್ಟೆ ಇಷ್ಟವಾಗಿಬಿಟ್ಟಿತ್ತು. ಆದರೆ ಅವರು ಇನ್ಯಾವುದೋ ಸಿನಿಮಾದ ಬಿಡುಗಡೆ ಗಡಿಬಿಡಿಯಲ್ಲಿದ್ದರು. ಅವತ್ತೇ ಅವರ ಸ್ನೇಹಿತರೊಬ್ಬರ ಮಗನ ಮದುವೆ ಇತ್ತು. ಇನ್ನೊಮ್ಮೆ ಭೇಟಿ ಮಾಡುವುದಾಗಿ ಹೇಳಿ, ಕಳಿಸಿದರು.

ನಾನು ಹೊರಗಡೆ ನಿಂತುಕೊಂಡಿದ್ದೆ. ಅವರ ಮನೆ ಮುಂದೆ ಅವರದ್ದೇ ಸಿನಿಮಾಗಳ ಹಳೆಯ ಕಟೌಟ್‌ಗಳನ್ನು ಇಟ್ಟಿದ್ದರು. ಅವುಗಳನ್ನೇ ನೋಡ್ತಾ ನಿಂತಿದ್ದೆ. ಬೆಲ್ ಬಾಟಂ ಕಾಲದಿಂದ, ಅವರು ಬಂದೂಕು ಕುದುರೆಗಳ ಮೇಲೆ ಇರುವ ಕಟೌಟ್‌ಗಳೆಲ್ಲ ಅಲ್ಲಿದ್ದವು. ಆಗವರು ರೋಲ್ಸ್‌ರಾಯ್ ಕಾರನ್ನು ತಾವೇ ಓಡಿಸಿಕೊಂಡು ಬಂದರು. ಕಿಟಕಿಯಲ್ಲಿ ಇಣುಕಿ ನನಗೆ 'ಬಾಯ್' ಎಂದರು. ಅದಾಗಿ ಎರಡು ಮೂರು ದಿನದ ನಂತರ ಅವರಿಗೆ 72 ವರ್ಷ ಎಂದು ಗೊತ್ತಾಯ್ತು. ಆಗ ನಾನು ಅಂದುಕೊಂಡಿದ್ದು ಇಷ್ಟೆ: ನಾವು ಈ ಸಿನಿಮಾ ಮಾಡ್ತೀವೋ ಬಿಡ್ತೀವೋ, ಆದರೆ 72ನೇ ವಯಸ್ಸಿನವರೆಗೆ ಫ್ರೆಂಡ್ ಮಗನ ಮದುವೆಗೆ ಹೋಗುವುದು, ಬೇಕಾದವರನ್ನು ಭೇಟಿ ಮಾಡುವುದು, ಅಷ್ಟು ದುಬಾರಿ ಕಾರ್ ಇರತ್ತೋ ಬಿಡತ್ತೋ ಆಟೊದಲ್ಲಿಯಾದರೂ ಹೋಗುವಷ್ಟು ಚೈತನ್ಯ ನನಗೂ ಇದ್ದರೆ ಸಾಕು.

ಅವರ ಎರಡು ಭೇಟಿಗಳು, ಅಲ್ಲಿ ಕಂಡ ಅವರ ಎನರ್ಜಿ ನನ್ನ ಪಾಲಿಗೆ ತುಂಬಾ ಅವಿಸ್ಮರಣೀಯ. ಅವು ಇಂದಿಗೂ ನನ್ನೊಳಗೆ ಏನೇನೋ ಹೇಳುತ್ತಲೇ ಬಂದಿವೆ. ಭೇಟಿಯಲ್ಲಿ ಕಂಡ ಅವರ ಹತ್ತಿರದ ಬಿಂಬ, ಅವರ ಕೈ, ಮುಖ ಇವೆಲ್ಲ ಸಿನಿಮಾದಲ್ಲಿ ಸಿಕ್ಕಲ್ಲ; ಎದುರುಗಡೆ ಸಿಕ್ಕಾಗಲೇ ಕಾಣುವುದು. ನಾವು ಮೂವರಲ್ಲಿ ಯಾರದೋ ಮೊಬೈಲ್‌ನಲ್ಲಿ ಫೋಟೊಗಳನ್ನೂ ತೆಗೆದುಕೊಂಡಿದ್ದೆವು. ಆದರೆ ನಾನು ಅತಿಯಾಗಿ ಇಷ್ಟಪಡುವ ವ್ಯಕ್ತಿಯ ಜೊತೆಗಿನ ನನ್ನದೇ ಫೋಟೊ ನೋಡುವುದು ಕಿರಿಕಿರಿ ಅನಿಸಿ ಆ ಫೋಟೊಗಳನ್ನು ಇಟ್ಟುಕೊಳ್ಳಲಿಕ್ಕೇ ಹೋಗಲಿಲ್ಲ.

ಅಮಿತಾಭ್ ಬದುಕೇ ಒಂದು ಸಿನಿಮಾ ಕಥೆ ಇದ್ದ ಹಾಗಿದೆ. ಎಂಥ ಜನಪ್ರಿಯತೆ ಇರುವ, ಎಷ್ಟು ದೊಡ್ಡ ವ್ಯಕ್ತಿಯಾಗಿದ್ದರೂ ಒಂದು ಹಂತದಲ್ಲಿ ರೋಡಿಗೆ ಬರುವ ಸಾಧ್ಯತೆ ಇದ್ದೇ ಇರುತ್ತದೆ ಎನ್ನುವುದಕ್ಕೆ ಅಮಿತಾಭ್ ಬದುಕು ಜೀವಂತ ಉದಾಹರಣೆ. ಅವತ್ತೇ ಏನೇನೋ ಸಾಹಸಗಳನ್ನು ಮಾಡಲು ಹೊರಟು ಕೈಸುಟ್ಟುಕೊಂಡರು. ಆದರೆ ಸೋಲಲಿಲ್ಲ; ಸುಮ್ಮನಿರಲಿಲ್ಲ. ನಂತರ ಮತ್ತೆ ನಟನೆಯನ್ನೇ ನೆಚ್ಚಿಕೊಂಡು 'ಕರೋಡ್‌ಪತಿ' ಕಾರ್ಯಕ್ರಮ ಮಾಡಿ ಚೇತರಿಸಿಕೊಂಡರು. ಐವತ್ತರ ಆಜುಬಾಜಿನ ಎಷ್ಟೋ ನಟರು ನಮ್ಮ ಸಿನಿಮಾ ಓಡುತ್ತಿಲ್ಲ, ಜನ ಶಿಳ್ಳೆ ಹೊಡೆಯುತ್ತಿಲ್ಲ ಎಂದು ಡಿಪ್ರೆಶನ್‌ಗೆ ಹೊರಟು ಹೋಗಿರುವ ಉದಾಹರಣೆಗಳಿವೆ. ಅಮಿತಾಭ್ ಬದುಕಿನಲ್ಲಿಯೂ ಇಂಥ ವೈಫಲ್ಯ ಎದುರಾಗಿತ್ತು. ಆದರೆ ಅವರು ಯಾವತ್ತೂ ನಿರುದ್ಯೋಗಿ ಆಗಲಿಲ್ಲ. ವಯಸ್ಸಾದ ಹಾಗೆ ಹೆಚ್ಚು ಹೆಚ್ಚು ಕೆಲಸ ಮಾಡುತ್ತಲೇ ಹೋದರು. ಕಲೆಗೆ ನಿವೃತ್ತಿ ಅನ್ನುವುದು ಇರುವುದಿಲ್ಲ. ನಾವ್ಯಾರೂ ನಿವೃತ್ತರಲ್ಲ, ಆಗಬಾರದು ಎಂಬ ಸಂಗತಿಯನ್ನು ಅವರಿಂದ ಕಲಿತುಬಿಟ್ಟರೆ ಬದುಕು ಬೇರೆಯೇ ಕಾಣಿಸತೊಡಗುತ್ತದೆ.

ಈಗ ಅಮಿತಾಭ್ ಬಚ್ಚನ್‌ಗೆ ದಾದಾಸಾಹೇಬ್ ಫಾಲ್ಕೆ ಪ್ರಶಸ್ತಿ ಬಂದಿದೆ. ನನ್ನ ಪ್ರಕಾರ ಅವರಿಗೆ ಈ ಪ್ರಶಸ್ತಿ ಯಾವತ್ತೋ ಸಿಕ್ಕಿದೆ. ಇವತ್ತು ಕೊಟ್ಟಿದಾರೆ ಅಷ್ಟೆ. ದಾದಾಸಾಹೇಬ್ ಫಾಲ್ಕೆ ಪ್ರಶಸ್ತಿ ದೊಡ್ಡದು. ಅಮಿತಾಭ್ ಅವರದ್ದು ಪ್ರಶಸ್ತಿಯನ್ನು ಮೀರಿದ ವ್ಯಕ್ತಿತ್ವ. ಈ ಪ್ರಶಸ್ತಿಗಷ್ಟೇ ಅಲ್ಲ, ಅವರ ಜೀವನಪ್ರೀತಿಯ ಪ್ರತಿದಿನಕ್ಕೂ, ಪ್ರತಿಕ್ಷಣಕ್ಕೂ ನನ್ನ ಶುಭಾಶಯ ಇದ್ದೇ ಇದೆ. ■

## ನಿರ್ದೇಶಕನ ಕಣ್ಣಿನಲ್ಲಿ

ನಾವು ಯಾರನ್ನೋ ಇಷ್ಟಪಟ್ಟರೆ ಅವರ ನ್ಯೂನ್ಯತೆಗಳ ಜೊತೆಗೇ ಇಷ್ಟಪಟ್ಟಿರ್ತೀವಿ. ಅವರ ಸಿನಿಮಾಗಳು ಚೆನ್ನಾಗಿಲ್ಲ ಎಂದರೂ ಚೆನ್ನಾಗಿದೆ ಎಂದು ವಾದ ಮಾಡಿರ್ತೀವಿ. ಆದರೆ ಇವತ್ತು ಕೂತು ಯೋಚಿಸಿದಾಗ, 'ಅದು ನಿಜವಾಗ್ಲೂ ಅಷ್ಟೊಂದು ನೆಟ್ಟಗಿರ್ಲಿಲ್ಲ. ನಾನು ವಾದ ಮಾಡಿದ್ದು ಸರಿ ಇಲ್ಲ' ಅನಿಸತ್ತೆ.

ಕೆಲವು ವಿಷಯಗಳು ತುಂಬ ಅದ್ಭುತವಾದದ್ದು, ಅದನ್ನು ಅವರನ್ನು ಬಿಟ್ಟರೆ ಇನ್ಯಾರೂ ಮಾಡಲು ಸಾಧ್ಯವೇ ಇಲ್ಲ ಎಂದು ಆಗಲೂ ಈಗಲೂ ಅನಿಸುತ್ತದೆ. ಹೀಗೆ ನಮ್ಮ ಆಲೋಚನೆಗಳನ್ನು ಒರೆಗೆ ಹಚ್ಚಿ ಪರಿಷ್ಕರಿಸಿಕೊಳ್ಳುವುದು ಯಾವಾಗಲೂ ಇದ್ದೇ ಇರುತ್ತದೆ. ಅದನ್ನು ಫುಲ್ ಟೈಮ್ ಮಾಡುವವರು ವಿಮರ್ಶಕರು. ಪ್ರಾಕ್ಟಿಕಲಿ ಮಾಡುವುದರಿಂದ ನಾವು ನಿರ್ದೇಶಕರು. ಅಮಿತಾಭ್ ವಿಷಯದಲ್ಲಿಯೂ ನನಗೆ ಹೀಗೆಯೇ ಆಗಿದೆ.